# ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

## ದಿನಾಂಕಃ 08.06.2026

## ಸಿ.ಸಿ. ಸಂಖ್ಯೆಃ 1001/2020

ಪಿರ್ಯಾದಿದಾರರು : ಸರ್ಕಾರದ ಪರ ಅಬಕಾರಿ ನಿರೀಕ್ಷಕರು
ಹುಣಸೂರು ವಲಯ, ಹುಣಸೂರು.

- ವಿರುದ್ಧ -

ಆರೋಪಿ/ತರು : 1. ವರುಣ್ ಕುಮಾರ್ ಬಿ.ಬಿ. ಬಿನ್ ಬಿ.ಎಸ್.ಬಿದ್ದಪ್ಪ
ವಾಸಃ ಉಡವೇಪುರ ಗ್ರಾಮದ ಗೇಟ್,
ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

2. ಚಂದ್ರಮ್ಮ ಕೋಂ ತಿಮ್ಮಯ್ಯ
ವಾಸಃ ಉಡವೇಪುರ ಗ್ರಾಮ,
ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

### ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿಯ ಹೇಳಿಕೆ

**ಪ್ರಶ್ನೆ 1:** ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?

**ಆರೋಪಿ ಉತ್ತರಃ**

**ಪ್ರಶ್ನೆ2:** ಚಾಸಾ-03/ಪ್ರಾಸಾ.1 ಶಿವಕುಮಾರ್ ರವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ, ದಿನಾಂಕ 16.02.2019 ರಂದು ನಾನು ಚಾಸಾ-4, 5 ಮತ್ತು 9 ರವರೊಂದಿಗೆ ಕಛೇರಿಯಿಂದ ಗಸ್ತು ಕರ್ತವ್ಯಕ್ಕೆ ತೆರಳಿ ಹುಣಸೂರು ವಲಯದ

ಬೀರತಮ್ಮನಹಳ್ಳಿಯಲ್ಲಿ ಗಸ್ತು ನಿರ್ವಹಿಸುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಒಬ್ಬ ವ್ಯಕ್ತಿ ಚಾಸಾ-9 ರವರಿಗೆ ಮಾಹಿತಿ ನೀಡಿದ ಮೇರೆಗೆ ಕಡೆಮನುಗನಹಳ್ಳಿ ಗ್ರಾಮದಲ್ಲಿ ವಾಹನವನ್ನು ನಿಲ್ಲಿಸಿ ವಿಚಾರ ಮಾಡಿದಾಗ ಉಡವೇಪುರ ಗ್ರಾಮದ ವರುಣ್ ಕುಮಾರ್ ತನ್ನ ಪಂಪ್ ಸೆಟ್ ನಲ್ಲಿ ಅಕ್ರಮವಾಗಿ ಮದ್ಯವನ್ನು ಹೊಂದಿರುವುದಾಗಿ ಮಾಹಿತಿ ನೀಡಿದ್ದು, ಪಂಚರಾದ ಚಾಸಾ-1 ಮತ್ತು 2 ರವರೊಂದಿಗೆ ಆರೋಪಿಯ ಮನೆಯ ಹತ್ತಿರ ಹೋಗಿ ಪರಿಶೀಲಸಿ ಪರಸ್ಪರ ಅಂಗಶೋಧನೆ ಮಾಡಿದಾಗ 90 ಎಮ್.ಎಲ್ ನ ಓರಿಜಿನಲ್ ಚಾಯ್ಸ್ ಡಿಲಕ್ಸ ವಿಸ್ಕಿಯ 4 ರಟ್ಟಿನ ಬಾಕ್ಸ್ ಗಳಿದ್ದು ಪ್ರತಿಯೊಂದು ಬಾಕ್ಸನಲ್ಲಿಯೂ 96 ಮದ್ಯದ ಟೆಟ್ರಾ ಪ್ಯಾಕೇಟ್‌ಗಳು ಇದ್ದವು. ನಂತರ ವಶಪಡಿಸಿಕೊಂಡ ಒರಿಜಿನಲ್ ಮದ್ಯದ ಟೆಟ್ರಾ ಪ್ಯಾಕೇಟ್‌ಗಳ ಪೈಕಿ ಪ್ರತಿಯೊಂದು ಬಾಕ್ಸ್ ನಿಂದ ತಲಾ 10 ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಸೀಲ್ ಮಾಡಿ ಕಳುಹಿಸಲಾಯಿತು. ಮಹಜರ್ ನ್ನು ಮದ್ಯಾಹ್ನ 12.00 ರಿಂದ 1.30 ರವರೆಗೆ ಜರುಗಿಸಿರುತ್ತೇನೆ. ನಂತರ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ವರುಣ್ ಕುಮಾರ್ ಬಿನ್ ಬಿದ್ದಪ್ಪ ವಾಸ ಉಡವೇಪುರ ಗ್ರಾಮ ಎಂದು ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಾ?

**ಆರೋಪಿ ಉತ್ತರಃ**

**ಪ್ರಶ್ನೆ 3:** ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ?

**ಆರೋಪಿ ಉತ್ತರಃ**

**ಪ್ರಶ್ನೆ 4:** ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ? ಅವರ ವಿಚಾರಣೆ ಆಗಬೇಕೆ?

**ಆರೋಪಿ ಉತ್ತರಃ**

**ಪ್ರಶ್ನೆ5** : ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ**?** ಅವುಗಳನ್ನು ಹಾಜರುಪಡಿಸುವಿರಾ**?**

**ಆರೋಪಿ ಉತ್ತರಃ**

(ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಎದುರು ಆರೋಪಿಗೆ ತಿಳಿದ ಬಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ ಆರೋಪಿಯು ಹೇಳಿದ ಉತ್ತರಗಳನ್ನು ಯಾಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಧೃಢೀಕರಿಸಲಾಗಿದೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,

ಹುಣಸೂರು

**ಆರೋಪಿಯ ಸಹಿಃ**